# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - MONDAY 19-12-2022



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಡಿಸೆಂಬರ್ 15 ರ ತನಕ ಭಾರತ ಸಕ್ಕರೆ ಉತ್ಪಾದನೆ 82.1 ಲಕ್ಷ ಟನ್‌ಗಳು

ಈ ಸೀಸನ್‌ನಲ್ಲಿ ಡಿಸೆಂಬರ್ 15 ರ ತನಕದ ಭಾರತದ ಸಕ್ಕರೆ ಉತ್ಪಾದನೆ ಹಿಂದಿನ ಸೀಸನ್‌ಗಿಂತ 5.1 ಶೇಕಡಾ ಹೆಚ್ಚಳವಾಗಿ 82.1 ಲಕ್ಷ ಟನ್‌ಗಳಾಗಿವೆಯೆನ್ನಲಾಗಿದೆ. ಹಿಂದಿನ ವರ್ಷದ ಇದೇ ಅವಧಿಗೆ 77.9 ಲಕ್ಷ ಟನ್ ಸಕ್ಕರೆ ಉತ್ಪಾದಿಸಲಾಗಿತ್ತು. ಮಹಾರಾಷ್ಟ್ರದಲ್ಲಿ 33 ಲಕ್ಷ ಟನ್ ಸಕ್ಕರೆ ಉತ್ಪಾದನೆ ಹಾಗೂ ಉತ್ತರಪ್ರದೇಶದಲ್ಲಿ 20 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿದೆಯೆನ್ನಲಾಗಿದೆ. ಹಿಂದಿನ ವರ್ಷ 479 ಮಿಲ್‌ಗಳು ಕಾರ್ಯಾಚರಿಸುತ್ತಿತ್ತು ಮತ್ತು ಈಗ 497 ಮಿಲ್‌ಗಳು ಕಾರ್ಯನಿರತವಾಗಿವೆಯೆನ್ನಲಾಗಿದೆ. 60 ಲಕ್ಷ ಟನ್ ರಫ್ತು, ಕೋಟಾದಲ್ಲಿ ಇದುವರೆಗೆ 45–50 ಲಕ್ಷ ಟನ್ ಸಕ್ಕರೆ ರಫ್ತು ಒಡಂಬಡಿಕೆಯಾಗಿದೆಯೆನ್ನಲಾಗಿದೆ. ಇದರಲ್ಲಿ ನವೆಂಬರ್ ಅಂತ್ಯದ ತನಕ 6 ಲಕ್ಷ ಟನ್ ಸಕ್ಕರೆ ರಫ್ತಾಗಿದೆಯೆನ್ನಲಾಗಿದ್ದು, ಈ ತಿಂಗಳ ಅಂತ್ಯದ ವೇಳೆಗೆ ಇನ್ನೂ 8–9 ಲಕ್ಷ ಟನ್ ಸಕ್ಕರೆ ರಫ್ತಾಗುವ ನಿರೀಕ್ಷೆಯಿದೆಯೆನ್ನಲಾಗಿದೆ.

## ರಾಬಿ ಬಿತ್ತನೆ ಪ್ರಗತಿ

ಈ ಸೀಸನ್‌ನಲ್ಲಿ ರಾಬಿ ಬಿತ್ತನೆ ಪ್ರದೇಶ ಹಿಂದಿನ ವರ್ಷದ ಈ ಅವಧಿಯಲ್ಲಿದ್ದ 552.28 ಲಕ್ಷ ಹೆಕ್ಟೇರ್‌ಗಳಿಂದ 578.10 ಲಕ್ಷ ಹೆಕ್ಟೇರ್‌ಗೆ ಹೆಚ್ಚಳವಾಗಿದೆಯೆನ್ನಲಾಗಿದೆ. ಗೋಧಿ ಬಿತ್ತನೆ ಪ್ರದೇಶ ಹಿಂದಿನ ವರ್ಷದ ಈ ಅವಧಿಯ 278.25 ಲಕ್ಷ ಹೆಕ್ಟೇರ್ ಗಳಿಂದ 286.5 ಲಕ್ಷ ಹೆಕ್ಟೇರ್‌ಗಳಾಗಿ 3 ಶೇಕಡಾ ಹೆಚ್ಚಳವಾಗಿದೆ. ಭತ್ತ ಬಿತ್ತನೆ ಹಿಂದಿನ ವರ್ಷದ 11.13 ಲಕ್ಷ ಹೆಕ್ಟೇರ್ ಗಳಿಂದ 12.64 ಹೆಕ್ಟೇರ್‌ಗೆ ಹೆಚ್ಚಳಗೊಂಡಿದೆ. ಬೇಳೆಕಾಳು ಬಿತ್ತನೆ ಹಿಂದಿನ ವರ್ಷದ 134.01 ಲಕ್ಷ ಹೆಕ್ಟೇರ್‌ಗಳಿಂದ 139.68 ಲಕ್ಷ ಹೆಕ್ಟೇರ್‌ಗಳಿಗೆ ಹೆಚ್ಚಳಗೊಂಡಿದೆ. ಇದರಲ್ಲಿ ಕಡೆ ಬಿತ್ತನೆ ಹಿಂದಿನ ವರ್ಷದ 94.97 ಲಕ್ಷ ಹೆಕ್ಟೇರ್‌ಗಳಿಂದ 97.9 ಲಕ್ಷ ಹೆಕ್ಟೇರ್‌ಗಳಿಗೆ ಹೆಚ್ಚಳವಾಗಿದೆ. ಎಣ್ಣೆ ಬೀಜಗಳ ಬಿತ್ತನೆ 90.51 ಲಕ್ಷ ಹೆಕ್ಟೇರ್ ಗಳಿಂದ 97.94 ಲಕ್ಷ ಹೆಕ್ಟೇರ್ ಗಳಿಗೆ ಹೆಚ್ಚಳವಾಗಿದೆ. ಇತರ ಧಾನ್ಯಗಳ ಬಿತ್ತನೆ 38.37 ಲಕ್ಷ ಹೆಕ್ಟೇರ್ ಗಳಿಂದ 41.34 ಲಕ್ಷ ಹೆಕ್ಟೇರ್‌ಗಳಿಗೆ ಹೆಚ್ಚಳವಾಗಿದೆ.